# ನವಿಲುಗನ್ನಡಿ




ಮುಖಪುಟ ಆಕರ್ಷಕವಾಗಿದೆ. ಮೂರು ಕನ್ನಡ, ಮೂರು ಅನುವಾದಿತ ಕತೆಗಳು ಹಾಗೂ ಪತ್ತೇದಾರಿ ಕತೆ ಉತ್ತಮ ಓದಿನ ಅನುಭವ ಕೊಟ್ಟವು. ರಹಮತ್ ತರೀಕೆರೆ ಅವರ ಪ್ರಬಂಧ 'ಹಂಪಿ ರೋಡಿನ ಅನುಭವಗಳು' ನಾವು ಹಂಪಿಯನ್ನು ನೋಡಿ ಬಂದ ನೆನಪನ್ನು ಮರುಕಳಿಸಿತು.

**ಸಿಪಾಯಿ ಮೃತ್ಯುಂಜಯ,** ಮಡಿಕೇರಿ

'ಮಯೂರ ಲಾಸ್ಯ'ಕ್ಕೆ ಮರುಳಾಗಿರುವ, ಮರುಳಾಗಿರಬಹುದಾದ ನೂರಾರು ಓದುಗರಲ್ಲಿ ನಾನೂ ಒಬ್ಬ. 'ಮಯೂರ'ದಲ್ಲಿ ನಾನು ಮೊದಲು ಕಂಡದ್ದೇ ರಹಮತ್ ತರೀಕೆರೆ ಅವರ ಪ್ರಬಂಧ. ಅದನ್ನು ಓದಿ ಮೆಚ್ಚುಗೆ ಆಯಿತು. ಅವರು ಬರೆದ ಹಲವಾರು ಪ್ರಸಂಗಗಳನ್ನು ಕಣ್ಣಾರೆ ಕಂಡವನು ನಾನು. ಓದುವಾಗ ಮಧ್ಯೆ ಮಧ್ಯೆ ನಗುವಂತಾಯ್ತು. ಅಬ್ಬಾ! ಎಂತಹ ಎಡವಟ್ಟು ಪರಿಸರದ ಬಗ್ಗೆ ಅದೆಷ್ಟು ಬಣ್ಣನೆ; ಆಕರ್ಷಕ ವರ್ಣನೆ! ವಸುಮತಿ ಉಡುಪ ಅವರ ಕತೆ 'ಚದುರಂಗ' 'ಬೆಳ್ಳಿ ಮೋಡ' ಚಿತ್ರವನ್ನು ನೆನಪಿಸಿತು.

**ಕೆ.ಎಂ. ಮಧ್ವರಾಯ,** ಬೆಂಗಳೂರು

'ಹಂಪಿ ರೋಡಿನ ಅನುಭವಗಳು' ಪ್ರಬಂಧ ತುಂಬಾ ರಸವತ್ತಾಗಿ ಮೂಡಿಬಂದಿದೆ. ಜನಪದ ಕತೆ 'ಪಂಥ ಗೆದ್ದ ತಾಯಿ ಮಗ' ನಮ್ಮ ಅಜ್ಜಿ ಹೇಳುತ್ತಿದ್ದ ಕತೆಗಳನ್ನು ನೆನಪಿಸಿತು. ಈ ಕತೆಯಲ್ಲಿ ಘಟನೆಗಳನ್ನು ಬೆಸೆಯುವ ರೀತಿ ತುಂಬಾ ಮಜವಾಗಿದೆ.

**ತಿಮ್ಮರಾಜು ಎಸ್.ಆರ್.,** ದಾವಣಗೆರೆ

'ರಾಮಣ್ಣ' ಕತೆ ಓದುಗರಿಗೆ ಒಂದು ನಿಜವಾದ ಬದುಕನ್ನು ಕಾಣಿಸಿದೆ. ಮನುಷ್ಯನ ಅಂತಃಕರಣವನ್ನು ಅದು ಒದ್ದೆಗೊಳಿಸುತ್ತದೆ. ಜೊತೆಗೆ ಮಾನವೀಯತೆಯೇ ಬದುಕಿನ ನಿಜವಾದ ಮೌಲ್ಯ ಎಂಬುದಕ್ಕೆ ಈ ಕತೆಯೇ ಉದಾಹರಣೆ.

**ಶ್ರೀಪತಿ ಕೆ.ಎಸ್.,** ಬೆಂಗಳೂರು

'ರಾಮಣ್ಣ' ಈ ಸಂಚಿಕೆಯ ಉತ್ತಮ ಕತೆಯಾಗಿದ್ದು, ಓದಿ ಕಣ್ಣುಗಳು ಹನಿಗೂಡಿದವು. ಉಳಿದ ಎಲ್ಲ ಕತೆಗಳು ಉತ್ತಮವಾಗಿದ್ದವು.

**ಕುಸುಮ,** ಬೆಜ್ಜವಳ್ಳಿ

ಎಂ.ಆರ್. ಮಂದಾರವಲ್ಲಿ ಅವರ ಕತೆ 'ಶ್ರೀಗಂಧ ನಾನಾಗಿ ಹುಟ್ಟುತ್ತಿದ್ದರೆ ಆಗ...' ನಮ್ಮ ಮನೆಯ ವಿದ್ಯಮಾನವೇ ಏನೋ ಎನ್ನುವಂತಿತ್ತು. ಅದರ ಧನಾತ್ಮಕ ಅಂತ್ಯ ಸಂತಸವನ್ನುಂಟುಮಾಡಿತು.

**ಎಚ್.ಎಸ್. ಶ್ರೀಮತಿ,** ಬೆಂಗಳೂರು

'ನವಿಲುಗರಿ' ಅಂಕಣದಲ್ಲಿ ಪ್ರಕಟವಾದ ವೇಣುಗೋಪಾಲ ಸೊರಬ ಅವರ ಕತೆ, 'ಝೆನ್: ಕ್ಷಣ–ದರ್ಶನ'ದಲ್ಲಿನ ಝೆನ್ ಕತೆಗಳ ವಿವರಣೆಗಳು ಮನಸೂರೆಗೊಂಡವು.

**ಮಮತಾ ಮಿರಾಶಿ,** ಬೆಂಗಳೂರು